# ಬದಲಾವಣೆಯ ಏಜೆಂಟರು ಮತ್ತು ಅಹಿಂಸಾತ್ಮಕ ಕ್ರಮ

# Agents of Change and Nonviolent Action

**Hardy Merriman**

Conservation Biology, Volume 22, No. 2
April 2008
Translation: April 2018

# TRANSLATOR'S NOTES

**ಬದಲಾವಣೆಯ ಏಜೆಂಟರು ಮತ್ತು ಅಹಿಂಸಾತ್ಮಕ ಕ್ರಮ***

ಅಹಿಂಸಾತ್ಮಕ ಕ್ರಮ ಎಂಬುದು ಸಾಮಾನ್ಯ ಜನರು ತಮ್ಮ ಹಕ್ಕುಗಳು, ಸ್ವಾತಂತ್ರ್ಯ ಮತ್ತು ನ್ಯಾಯಕ್ಕಾಗಿ ಹೋರಾಡುವ ವಿಧಾನವಾಗಿದೆ. ಇದು ಸಾಮಾನ್ಯವಾಗಿ ನೈತಿಕ ಅಥವಾ ಸೈದ್ಧಾಂತಿಕ ಅಹಿಂಸೆಗೆ ಸಂಬಂಧಿಸಿದೆ, ಆದರೆ ಇದನ್ನು ನಾನು ಇಲ್ಲಿ ವಿಶಿಷ್ಟ ಸನ್ನಿವೇಶ ಎಂದು ವ್ಯಾಖ್ಯಾನಿಸುತ್ತೇನೆ. ಯಾವುದೇ ನೈತಿಕ ಅಥವಾ ಸೈದ್ಧಾಂತಿಕ ಅಂಶಗಳಿಂದ ಪ್ರತ್ಯೇಕವಾಗಿ ಇದು ಇರುತ್ತದೆ. ಸಂಘರ್ಷದಲ್ಲಿ ಹೊರೆ ಕಡಿಮೆ ಮಾಡುವುದು ಹೇಗೆ ಎಂಬ ವಿಷಯದಲ್ಲಿ ಇದು ಕಾರ್ಯನಿರ್ವಹಿಸುತ್ತದೆ.

ಅಹಿಂಸೆಯ ಕ್ರಮ ಎಂಬುದು ಸಮಾಜದಲ್ಲಿರುವ ಅಧಿಕಾರದ ಒಳನೋಟವನ್ನು ಆಧರಿಸಿದ್ದಾಗಿದ್ದು, ಜನರ ಸಮ್ಮತಿ ಮತ್ತು ಬದ್ಧತೆಯಿಂದ ಪಡೆದಿದ್ದಾಗಿದೆ. ತದ್ವಿರುದ್ಧವಾಗಿ, ಹಿಂಸೆ ಸೃಷ್ಟಿಸಲು ಹೆಚ್ಚು ಶಕ್ತರಾಗಿರುವವರು ಮತ್ತು ಶ್ರೀಮಂತಿಕೆಯ ಮೇಲೆ ಗಮನ ಹರಿಸಿರುವವರನ್ನು ಸಮಾಜದ ಶಕ್ತಿಯು ಅವಲಂಬಿಸಿರುತ್ತದೆ ಎಂದು ನಂಬಲಾಗಿದೆ. ಆದರೆ, ಭೂಗೋಳದಲ್ಲಿ ಆರ್ಥಿಕತೆಯು ಒಂದು ಉಪ ವ್ಯವಸ್ಥೆಯಾಗಿದೆ ಮತ್ತು ಭೂಮಿಯ ಕಾನೂನಿನಿಂದ ಒಟ್ಟಾರೆಯಾಗಿ ನಿರ್ಧರಿಸಲ್ಪಟ್ಟಿದೆ. ಹೀಗಾಗಿ ಹಿಂಸೆಯನ್ನು ಆಧರಿಸಿದ ಅಧಿಕಾರದ ವ್ಯವಸ್ಥೆ ಮತ್ತು ಹಣವು ಸಾವಿರಾರು ಅಥವಾ ಮಿಲಿಯನ್‌ಗಟ್ಟಲೆ ಜನರ ವರ್ತನೆ ಮತ್ತು ವಿನಯದ ವಿಶಾಲವಾದ ಉಪ ವ್ಯವಸ್ಥೆಯಾಗಿರುತ್ತದೆ. ಆ ಜನರು ತಮ್ಮ ವಿಶ್ವಾಸಾರ್ಹತೆ, ವರ್ತನೆ ಮತ್ತು ವಿನಯವನ್ನು ಬದಲಿಸಿದರೆ, ಸಮಾಜದಲ್ಲಿನ ಅಧಿಕಾರದ ಸಮತೋಲನವೂ ವಿಶ್ವದಲ್ಲಿ ಬದಲಾಗುತ್ತದೆ. ಸರಳವಾಗಿ ಹೇಳುವುದಾದರೆ, ಜನರು ವಿನಯವಾಗಿಲ್ಲದಿದ್ದರೆ ಆಡಳಿತಗಾರರು ಮತ್ತು ಸಂಸ್ಥೆಗಳು ಆಡಳಿತ ನಡೆಸಲಾರವು.

ಅಹಿಂಸೆ ಕ್ರಮವು ಜನರ ನಂಬಿಕೆ, ವರ್ತನೆ ಮತ್ತು ವಿನಯ ವಿಧಾನದಲ್ಲಿ ಸಂಚಿತ ಮಟ್ಟದಲ್ಲಿ ಬದಲಾವಣೆ ಮೂಡಿಸುವ ಮೂಲಕ ಅಧಿಕಾರವನ್ನು ಪಡೆಯುತ್ತದೆ. ಇದು ಗಮನಾರ್ಹವಾಗಿ ಉಂಟಾಗಬಹುದು. ಉದಾಹರಣೆಗೆ ಇದು ಭಾರತದ ಸ್ವಾತಂತ್ರ್ಯ ಹೋರಾಟ, ಅಮೆರಿಕ ನಾಗರಿಕ ಹಕ್ಕು ಚಳವಳಿ, ವಿವಿಧ ಕಾರ್ಮಿಕ ಹೋರಾಟಗಳು (ಅಂದರೆ 1960ರ ಮಧ್ಯಭಾಗದಲ್ಲಿ ಯುನೈಟೆಡ್ ಫಾರಂ ವರ್ಕರ್ಸ್ ಚಳವಳಿ) ಮತ್ತು ಫೆರ್ಡಿನಂಡ್ ಮಾರ್ಕೋಸ್ ಪತನ (1986), ಆಗಸ್ಟೋ ಪಿನೋಚೆಟ್ (1988), ದಕ್ಷಿಣ ಆಫ್ರಿಕಾದಲ್ಲಿನ ಹೋರಾಟ (1980s-90s), ಸ್ಲೋಬೊಡನ್ ಮಿಲೋಸೆವಿಕ್ (2000) ಮತ್ತು ಉಕ್ರೇನ್‌ನಲ್ಲಿ ಅಥಾರಿಟೇರಿಯನ್ ಸಿಸ್ಟಂ (2004) ನಲ್ಲೂ ನಡೆಯಿತು. ಅಥವಾ, ಬದಲಾವಣೆಗಳು ಹೆಚ್ಚು ಸಮಾಧಾನವಾಗಿ ನಡೆಯಬಹುದು, ಜನರು ಸ್ಥಳೀಯವಾಗಿ ಅಂಗಡಿಗಳಂತಹ ಅಂಗಡಿಗಳನ್ನು ಆಯ್ಕೆ ಮಾಡಿಕೊಂಡು ಉತ್ಪನ್ನವನ್ನು ನಿಲ್ಲಿಸಬಹುದು ಅಥವಾ ಪರ್ಯಾಯ ಸಂಸ್ಥೆಗಳು ಅಥವಾ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಲು ಶ್ರಮಿಸಬಹುದು. ವಿಧಾನಗಳು ಮತ್ತು ಮಾರ್ಗಗಳನ್ನು ಹೊರತುಪಡಿಸಿ, ಅಹಿಂಸೆಯ ಎಲ್ಲ ಕ್ರಮಗಳೂ ಮೂರು ವಿಭಾಗಗಳಿಗೆ ಒಳಪಟ್ಟಿರುತ್ತವೆ: ಜಾರಿ ಕ್ರಮಗಳು - ಅಂದರೆ ಜನರು ಈ ಕೆಲಸ ಮಾಡಲು ನಿರೀಕ್ಷಿಸುವುದಿಲ್ಲ, ಮಾಡಬಾರದು ಅಥವಾ ಮಾಡಲು ಅನುಮತಿಸಲಾಗುವುದಿಲ್ಲ ಎಂದು ಪರಿಭಾವಿಸುವುದು. ಅವರು ನಿರೀಕ್ಷಿಸಿದ, ಮಾಡಬೇಕಿರುವ ಅಥವಾ ಮಾಡಬಹುದಾದ ಸಂಗತಿಗಳನ್ನು ಜನರು ಮಾಡುವುದಿಲ್ಲ; ಅಥವಾ ಜಾರಿ ಮತ್ತು ಹೊರಗಿಡುವಿಕೆಯ ಕ್ರಮಗಳ ಸಂಯೋಜನೆ.

ಜನರ ವಿನಯ ಮತ್ತು ವರ್ತನೆ ವಿಧಾನದಲ್ಲಿ ಬದಲಾವಣೆಯನ್ನು ಪ್ರೋತ್ಸಾಹಿಸಲು, ಮೊದಲ ಹಂತದಲ್ಲಿ ಅದನ್ನು ಯಾಕೆ ಅವರು ಮಾಡಲು ಬಯಸುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಪ್ರಮುಖವಾಗಿದೆ. ಸಮಾಜದಿಂದ ಸಮಾಜಕ್ಕೆ ಕಾರಣಗಳು ಬದಲಾಗುತ್ತವೆ. ಆದರೆ ನಾನು ಹೋರಾಟಗಾರರು ಮತ್ತು ಸಂಘಟನೆಗಾರರೊಂದಿಗೆ ನನ್ನ ಕೆಲಸದಲ್ಲಿ ನಾನು ಎದುರಿಸಿದ ವಿನಯಕ್ಕೆ ಅತ್ಯಂತ ಸಾಮಾನ್ಯವಾದ ಎರಡು ಕಾರಣಗಳೆಂದರೆ, ವರ್ತಿಸುವ ಪರ್ಯಾಯ ವಿಧಾನಗಳು ಯಾವುವೂ ಇಲ್ಲ ಎಂದು ಜನರು ಭಾವಿಸುವುದು ಮತ್ತು ಬದಲಾವಣೆಯ ಕ್ರಮಗಳನ್ನು ಕೈಗೊಳ್ಳಲು ಅವರಲ್ಲಿ ಆತ್ಮವಿಶ್ವಾಸದ ಕೊರತೆಯಾಗಿದೆ. ತಮ್ಮ ಸಮಾಜದಲ್ಲಿ ತಾವೇ ಅಧಿಕಾರದ ಚುಕ್ಕಾಣಿ ಹಿಡಿದಿರುವವರು ಎಂಬುದನ್ನು ಬಹುತೇಕ ಜನರು ಮರೆತಿದ್ದಾರೆ. ಆದಾಗ್ಯೂ, ಔಪಚಾರಿಕ ಶಿಕ್ಷಣ,

ಕಾರ್ಪೊರೇಶನ್‌ಗಳು, ಸರ್ಕಾರಗಳು ಮತ್ತು ಮಾಧ್ಯಮಗಳೆಲ್ಲವೂ ಸರ್ಕಾರಿ ಕಟ್ಟಡದಲ್ಲಿ ಅಥವಾ ಕಾರ್ಪೊರೇಟ್ ಕೇಮದ್ರ ಕಚೇರಿಗಳಲ್ಲಿನ ಕೆಲವೇ ವ್ಯಕ್ತಿಗಳ ಮಧ್ಯೆ ಅಧಿಕಾರ ಇರುತ್ತದೆ ಮತ್ತು ಸಾಮರ್ಥ್ಯಕ್ಕೆ ಹಣ ಮತ್ತು ಗನ್‌ಗಳೇ (ಇದನ್ನು ಇವರು ಹೊಂದಿರುತ್ತಾರೆ) ಅಂತಿಮ ಮೂಲ ಎಂದು ಬಿಂಬಿಸಿವೆ. ಈ ನಿರೂಪಣೆಯು ಅವರ ಉದ್ದೇಶವನ್ನೂ ಪೂರೈಸುತ್ತದೆ. ಇತಿಹಾಸದ ಎಲ್ಲ ಸಂದರ್ಭದಲ್ಲೂ ಯಶಸ್ವೀ ಅಹಿಂಸೆಯ ಚಳವಳಿಯು, ಜನರು ಒಗ್ಗಟ್ಟಾಗಿ ಹೋರಾಡಬೇಕಿರುವ ವಾಸ್ತವ ಮತ್ತು ಸಾಮಾನ್ಯ ಉದ್ದೇಶಕ್ಕೆ ಜನರು ಆಯೋಜನೆಗೊಳ್ಳುವುದು ಮತ್ತು ಸೇನೆ ಮತ್ತು ಹಣಕ್ಕಿಂತ ಹೆಚ್ಚು ವ್ಯೂಹಾತ್ಮಕವಾಗಿ ಕೆಲಸ ಮಾಡಬೇಕು ಎಂಬ ವಾಸ್ತವವನ್ನು ಜನರಲ್ಲಿ ಮೂಡಿಸಿದೆ. ಬದಲಾವಣೆಯನ್ನು ಬಯಸುವ ಯಾವುದೇ ಸಾಂಪ್ರದಾಯಿಕ ಮೂಲಾಧಾರದ ಚಳವಳಿಯು ಈ ವಾಸ್ತವವನ್ನು ಗಮನಿಸಬೇಕು ಮತ್ತು ಇಡೀ ಸನ್ನಿವೇಶದಲ್ಲಿ ತಾವೇ ಅಧಿಕಾರಸ್ಥರು ಎಂಬುದನ್ನು ಜನರಿಗೆ ತಿಳಿಸಬೇಕಿದೆ.

ಇದನ್ನು ಇನ್ನೂ ಒಂದು ಹೆಜ್ಜೆ ಮುಂದೆ ಕೊಂಡೊಯ್ಯುವುದಾದಲ್ಲಿ, ಯಶಸ್ವಿ ಚಳವಳಿಗಳು ಕೇವಲ ಜನರು ಅಧಿಕಾರಯುತರು ಎಂದು ಹೇಳುವುದಷ್ಟೇ ಅಲ್ಲ, ಸ್ಪಷ್ಟ ಮತ್ತು ಸಾಧಿಸಬಹುದಾದ ಗುರಿಯನ್ನು ನಿಗದಿಸುವ ಮೂಲಕ ಮತ್ತು ತಮ್ಮ ಯಶಸ್ಸನ್ನು ದಾಖಲಿಸುವುದು ಹಾಗೂ ಪ್ರಚುರಪಡಿಸುವ ಮೂಲಕ ಜನರ ಅಧಿಕಾರವನ್ನು ಪ್ರದರ್ಶಿಸುತ್ತದೆ. ಅವರಲ್ಲಿನ ವಿಜಯಗಳು ಸೀಮಿತವಾಗಿರಬಹುದು. ಆದರೆ ಜನರನ್ನು ಒಟ್ಟಾಗಿಸುವ ಅವುಗಳ ಪರಿಣಾಮವು ಅಭೂತಪೂರ್ವವಾಗಿದೆ. ಉದಾಹರಣೆಗೆ, ಯುಎಸ್ ನಾಗರಿಕ ಹಕ್ಕು ಚಳವಳಿಯು 1955-56ರಲ್ಲಿ ಅಬಾಮಾದ ಮಾಂಟ್ಗೊಮೆರಿಯಲ್ಲಿ ಬಸ್‌ಗಳಲ್ಲಿ ವರ್ಣಭೇದ ನೀತಿಯನ್ನು ತೊಡೆದುಹಾಕುವ ಮತ್ತು 1960ರಲ್ಲಿ ನಾಶ್‌ವಿಲೆ ಲಂಚ್ ಕೌಂಟರ್‌ಗಳಲ್ಲಿ ವರ್ಣಭೇದ ನೀತಿಯನ್ನು ತೊಡೆದುಹಾಕುವ ಮೂಲಕ ಶಕ್ತಿ ಪಡೆಯಿತು. ಭಾರತದ ಸ್ವಾತಂತ್ರ್ಯ ಚಳವಳಿಯು ಬ್ರಿಟಿಷರ ಉಪ್ಪು ಕಾಯ್ದೆ ಮತ್ತು ಇತರ ಕಾಯ್ದೆಗಳ ವಿರುದ್ಧ 1930-31ರಲ್ಲಿ ಹೋರಾಟ ಮಾಡುವ ಮೂಲಕ ಶಕ್ತಿ ಪಡೆಯಿತು. ಇದನ್ನು ಸಾಧಿಸಿದ ನಂತರ, ಈ ಉದ್ದೇಶಗಳು ಇಡೀ ದಕ್ಷಿಣ ಅಮೆರಿಕ ಅಥವಾ ಭಾರತದ ಸ್ವಾತಂತ್ರ್ಯ ಪಡೆಯುವ ಬೃಹತ್ ಉದ್ದೇಶಕ್ಕೆ ಒಂದು ಸಣ್ಣ ಪರ್ಯಾಯವಾಗಿ ರೂಪುಗೊಳ್ಳುತ್ತವೆ. ಆದರೆ, ಇವುಗಳ ನಿಜವಾದ ಪರಿಣಾಮವೇನೆಂದರೆ ಈ ಚಳವಳಿಗಳಿಗೆ ಈ ಯಶಸ್ಸನ್ನು ಬಳಸಿಕೊಳ್ಳುವುದಾಗಿದೆ. ಈ ಯಶಸ್ಸುಗಳು ಜನರಿಗೆ ತಮ್ಮ ಕ್ರಮಗಳು ಪ್ರಮುಖವಾಗಿರುತ್ತವೆ ಮತ್ತು ತಾವು ವಿಭಿನ್ನತೆಯನ್ನು ಸೃಷ್ಟಿಸಲು ಶಕ್ತರು ಎಂಬುದನ್ನು ಅರಿಯಲು ಸಾಧ್ಯವಾಗುತ್ತದೆ. ಇದು ಬೆಂಬಲವನ್ನು ಹೆಚ್ಚಿಸಲು ನೆರವಾಗುತ್ತದೆ ಮತ್ತು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಳವಳಿಯನ್ನು ಪ್ರತಿಬಿಂಬಿಸುತ್ತದೆ.

ಈ ಉದ್ದೇಶವನ್ನು ಸಣ್ಣ ಪ್ರಮಾಣದಲ್ಲಿ ಸಾಧಿಸಲಾಗದು. ಯಾಕೆಂದರೆ ಅಮೆರಿಕದ ನಾಗರಿಕ ಹಕ್ಕು ಚಳವಳಿ ಅಥವಾ ಭಾರತದ ಸ್ವಾತಂತ್ರ್ಯ ಚಳವಳಿಯು ನೈತಿಕ ಉನ್ನತಿಯನ್ನೂ ಒಳಗೊಂಡಿರುತ್ತದೆ. ಇವುಗಳನ್ನು ಕಠಿಣ ಪರಿಶ್ರಮ, ಕ್ರಿಯಾಶೀಲತೆ ಮತ್ತು ಕೌಶಲಯುತ ರಾಜಕೀಯ ವಿಶ್ಲೇಷಣೆಯಿಂದಲೂ ಸಾಧ್ಯವಾಗಿದೆ. ಇದು ಎಲ್ಲ ಅಹಿಂಸಾ ಚಳವಳಿಯಲ್ಲೂ ನಿಜವಾಗಿದೆ. ಆದಾಗ್ಯೂ, ಈ ವಾಸ್ತವಾಂಶವನ್ನು ಹಲವರು ನಿರ್ಲಕ್ಷಿಸುತ್ತಾರೆ ಮತ್ತು ಅಹಿಂಸೆಯ ಚಳವಳಿಗಳು ಕೇವಲ ಸಾರ್ವಜನಿಕರ ಪ್ರತಿಭಟನೆ, ವಿರೋಧದ ಅಭಿವ್ಯಕ್ತಿ ಮತ್ತು ನೈತಿಕ ತಡೆಯ ಮೂಲಕ ಸಾಧ್ಯವಾಗುತ್ತದೆ ಅಥವಾ ಆಕರ್ಷಕ ನಾಯಕರು ಅಥವಾ ಅಪೂರ್ವವಾದ ಶಕ್ತಿಯನ್ನು ಅವಲಂಬಿಸಿರುತ್ತದೆ ಎಂದು ನಂಬುತ್ತಾರೆ. ಆದರೆ, ಇದು ಹಗಲಲ್. ಪ್ಯಾಸಿಫಿಸಂ ಅಥವಾ ನೈತಿಕ ಅಹಿಂಸೆಗೆ ಸೈದ್ಧಾಂತಿಕವಾಗಿ ಬದ್ಧರಾದ ವ್ಯಕ್ತಿಗಳು ಮಾತ್ರ ಇದಕ್ಕೆ ಅಗತ್ಯವಿಲ್ಲ. ಇದಕ್ಕೆ ಅಗತ್ಯವಾಗಿರುವುದೇನೆಂದರೆ, ಜನರನ್ನು ಸೇರಿಸುವ, ವ್ಯೂಹಾತ್ಮಕ ಯೋಜನೆ, ಪರಿಣಾಮಕಾರಿ ಸಾರ್ವಜನಿಕ ಸಂವಹನಗಳು ಮತ್ತು ಸನ್ನಿವೇಶಕ್ಕೆ ಸೂಕ್ತವಾದ ವಿಧಾನಗಳನ್ನು ಗುರುತಿಸುವುದಾಗಿದೆ. ಎಲ್ಲ ಸನ್ನಿವೇಶಕ್ಕೂ ಒಂದೇ ಸಿದ್ಧ ಸೂತ್ರವಿಲ್ಲ. ಅಹಿಂಸೆಯ ಚಳವಳಿ ಎಂಬುದು ಕೇವಲ ಒಂದು ವಿಶಾಲ ವ್ಯಾಪ್ತಿಯ ಸೂಚನೆಯಷ್ಟೇ. ಇದನ್ನು ನಿರ್ದೇಶಿಸುವ ಸಿದ್ಧಾಂತಗಳಾದ ಅಧಿಕಾರವು ಸಮ್ಮತಿ ಮತ್ತು ವಿನಯಶೀಲರಲ್ಲಿ ಇರುವುದು, ಎಲ್ಲ ಹೋರಾಟಗಳಲ್ಲೂ ಸ್ಥಿರವಾಗಿದೆ. ಸಮಾಜದ ಸನ್ನಿವೇಶ ಮತ್ತು ಅಂಶಗಳ ಮೇಲೆ ಇದರ ಅಳವಡಿಕೆಯು ಅವಲಂಬಿಸಿರುತ್ತದೆ. ಇದು ಮುಕ್ತ ಸಾರ್ವಜನಿಕ

ಕ್ರಮವನ್ನು ಬಯಸುತ್ತದೆಯೇ ಅಥವಾ ಖರೀದಿ ವಿಧಾನದಲ್ಲಿ ಸುಮ್ಮನೆ ಬದಲಾವಣೆಯನ್ನು ಮಾಡುತ್ತದೆಯೇ ಅಥವಾ ಇವೆರಡನ್ನೂ ಮಾಡುತ್ತದೆಯೇ ಎಂಬುದನ್ನು ಆಧರಿಸಿ (ವಿವಿಧ ಹಂತದ ಅಹಿಂಸೆಯನ್ನು ಜನರು ಬಳಸುವುದಕ್ಕಾಗಿ ವಿವಿಧ ರೀತಿಯ ತಂತ್ರಗಳನ್ನು ಬಹುತೇಕ ಚಳವಳಿಗಳು ರೂಪಿಸುತ್ತವೆ), ತಮ್ಮ ಸಮಾಜದಲ್ಲಿ ಜನರಿಗೆ ರಾಜಕೀಯ ಅವಕಾಶವನ್ನು ರಚಿಸಲು ಅಥವಾ ಬಳಸಲು ಒಂದು ದಾರಿಯನ್ನು ಇದು ಒದಗಿಸುತ್ತದೆ.

ಅದೃಷ್ಟವಶಾತ್, ಜನರು ಹೇಗೆ ಬಳಸಬಹುದು ಮತ್ತು ಈ ಹಿಂದೆ ಹೇಗೆ ಬಳಸಲಾಗಿದೆ ಎಂಬುದರ ಬಗ್ಗೆ ತುಂಬಾ ಬೌದ್ಧಿಕ ಕೆಲಸ, ಸಂಶೋಧನೆ ಮತ್ತು ಸಂವಹನವನ್ನು ಮಾಡಲಾಗುತ್ತದೆ. ಈ ಜ್ಞಾನದ ಅಗತ್ಯವು  ನಿರಂತರವಾಗಿದ್ದು, ಅಹಿಂಸೆ ಚಳವಳಿಯನ್ನು ನಿರ್ವಹಿಸುತ್ತಿರುವ ಅಧಿಕಾರ ಮತ್ತು ಸಂಭಾವ್ಯತೆಯನ್ನು ಇದು ಒಳಗೊಂಡಿರುತ್ತದೆ. ಇದನ್ನು ನೀವು ಬಹುತೇಕ ದಿನಪತ್ರಿಕೆಗಳಲ್ಲಿ ಓದುವುದಿಲ್ಲ ಮತ್ತು ಇದರ ಬಗ್ಗೆ ಸಾಕಷ್ಟು ರಾಜಕಾರಣಿಗಳು ಮಾತನಾಡುವುದನ್ನೂ ಕೇಳಿಸಿಕೊಂಡಿರುವುದಿಲ್ಲ. ಆದರೆ ಬೇರು ಮಟ್ಟದ ಸಂಘಟನೆಕಾರರು ಮತ್ತು ನಾಗರಿಕ ಸಮಾಜದ ಸದಸ್ಯರು ನಿಮಗೆ ಇದನ್ನು ಹೇಳುತ್ತಾರೆ. ಬದಲಾವಣೆಯ ಏಜೆಂಟರು ಸಮಾಜದಲ್ಲಿರುವ ಜನರು ಮತ್ತು ರಚನಾತ್ಮಕ ಬದಲಾವಣೆಯು ಸಮೂಹದಿಂದಲೇ ಮಾಡಬಹುದು ಎಂಬುದನ್ನು ಅವರು ಗುರುತಿಸುತ್ತಾರೆ. ತಮ್ಮನ್ನು ಮುನ್ನಡೆಸುವ ವ್ಯಕ್ತಿಗಾಗಿ ಅವರು ಕಾಯುವುದಿಲ್ಲ. ಯಾಕೆಂದರೆ ಬಹುತೇಕ ಸರ್ಕಾರ ಮತ್ತು ಕಾರ್ಪೊರೇಟ್ ನಾಯಕರು ತಮ್ಮ ಸಮುದಾಯವು ತೊಂದರೆಗೆ ಸಿಲುಕಿದಾಗ ಮಾಡಬೇಕಿರುವದನ್ನು ಮಾಡಿರುವುದಿಲ್ಲ ಮತ್ತು ಅವರನ್ನು ಹೊಣೆಗಾರರನ್ನಾಗಿಸಲು ಅಗತ್ಯವಿರುವ ಅಂಶವನ್ನು ಅವು ಹೊಂದಿರುವುದಿಲ್ಲ. ಹೀಗಾಗಿ, ವಿಶ್ವಾದ್ಯಂತದ ಜನರು ಅಹಿಂಸೆಯ ಕ್ರಮಗಳಿಗಾಗಿ ಎದುರು ನೋಡುತ್ತಲೇ ಇದ್ದಾರೆ (ಮತದಾನ, ಕಾನೂನು ವ್ಯವಸ್ಥೆ ಅಥವಾ ಬದಲಾವಣೆ ಕೈಗೊಳ್ಳುವ ಇತರ ಸಾಂಪ್ರದಾಯಿಕ ವಿಧಾನಗಳನ್ನು ಅವರು ಬಳಸಬಹುದು). ಇದು ಮಾನವ ಹಕ್ಕುಗಳು, ಸ್ವಾತಂತ್ರ್ಯ, ನ್ಯಾಯ, ಪಾರದರ್ಶಕತೆ, ಮಹಿಳೆಯರ ಹಕ್ಕುಗಳು, ದೇಶೀ ಜನರು ಮತ್ತು ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಪರಿಸರ ರಕ್ಷಣೆಯನ್ನು ಸಾಧಿಸಲು ತಮ್ಮ ಸಮುದಾಯಗಳನ್ನು ಬಲಪಡಿಸುವ ವಿಧಾನವನ್ನು ಅವರು ಕಂಡುಕೊಂಡಿರುತ್ತವೆ. ಅಹಿಂಸೆಯ ಕ್ರಮವನ್ನು ಬಳಸುವ ಉದ್ದೇಶ ಯಾವುದೇ ಆಗಿದ್ದರೂ, ಇದರ ಪೂರ್ವ ಅಗತ್ಯಗಳು ಒಂದೇ ಆಗಿರುತ್ತವೆ: ಜನರ ಮನಸಿನಲ್ಲಿ ಅಧಿಕಾರದ ಕಲ್ಪನೆಯನ್ನು ಬದಲಿಸುವುದು. ಈ ಜ್ಞಾನವನ್ನು ಹಂಚಿಕೊಳ್ಳುವುದು ಮತ್ತು ಜನರಿಗೆ ತಮ್ಮ ಅಧಿಕಾರದ ಶಕ್ತಿಯನ್ನು ತಿಳಿಸುವುದು ಬದಲಾವಣೆಯ ಅಗತ್ಯ ಕೆಲಸವಾಗಿದೆ.